**ಕರ್ನಾಟಕ ಸರ್ಕಾರ**

**ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ/ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.**

## ಸಾಕ್ಷರ ಭಾರತ್ –2012

# ಪತ್ರಿಕಾ ಗೋಷ್ಠಿಯ ಟಿಪ್ಪಣಿ

**ಸಾಕ್ಷರ ಭಾರತ್:**

ಸಾಕ್ಷರ ಭಾರತ್ ಇದೊಂದು ಮಹತ್ವಾಕಾಂಕ್ಷಿ ಕಾರ್ಯಕ್ರಮ. ಇದು ಸಮಗ್ರ ಮತ್ತು ವ್ಯಾಪಕ ಕಾರ್ಯಕ್ರಮವಾಗಿದೆ. ಮಹಿಳಾ ಸಾಕ್ಷರತಾ ಪ್ರಮಾಣ ಶೇ. 50 ಕ್ಕಿಂತ ಕಡಿಮೆ ಇರುವ 26 ರಾಜ್ಯಗಳ 365 ಜಿಲ್ಲೆಗಳಲ್ಲಿ ಬರುವ 1,70,000 ಗ್ರಾಮಗಳಲ್ಲಿ ಅನುಷ್ಠಾನಗೊಳ್ಳಬೇಕಿದೆ. 15 + ವರ್ಷ ವಯೋಮಾನದ 70 ದಶಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಬೇಕಿದೆ. ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ.

**ಸಾಕ್ಷರತೆಯಲ್ಲಿ ನಮ್ಮ ಸ್ಥಾನ**

ಕರ್ನಾಟಕವು ಪ್ರಗತಿಯ ಹಾದಿಯಲ್ಲಿ ದಾಪುಗಾಲಿಡುತ್ತಾ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. 2001 ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 66.64 ರಷ್ಟಿದ್ದು, ದೇಶದ ಸಾಕ್ಷರತೆಗಿಂತ ತುಸು ಮುಂದಿದೆ. ನೆರೆಯ ಕೇರಳ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 91 ರಷ್ಟು ಇದ್ದು, ಸಾಕ್ಷರತೆಯಲ್ಲಿ ಪ್ರಥಮ ಸ್ಥಾನ. ನಮ್ಮದು 21 ನೇ ಸ್ಥಾನ.

**ಗುರಿ:**

ಈ ಕಾರ್ಯಕ್ರಮವು 18 ಜಿಲ್ಲೆಗಳ 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ, ಉಪಗ್ರಾಮಗಳ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದಾಗಿದೆ. ಉತ್ಪಾದನಾ ರಂಗದಲ್ಲಿ ತೊಡಗಿರುವ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರನ್ನು ಕಲಿಕೆಗೆ ಒಳಪಡಿಸಬೇಕಾಗಿದೆ.

ರಾಜ್ಯದ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ರಾಮನಗರ, ಬಳ್ಳಾರಿ, ಬೀದರ್, ಬಿಜಾಪುರ, ಬೆಳಗಾಂ, ಚಿತ್ರದುರ್ಗ, ಹಾವೇರಿ, ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ಮೈಸೂರು, ಮಂಡ್ಯ, ಚಾಮರಾಜನಗರ, ರಾಯಚೂರು, ತುಮಕೂರು, ಗದಗ ಈ 18 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

**ಉದ್ದೇಶ:**

- ಅನಕ್ಷರಸ್ಥರ ಕಲಿಕೆಗೆ ಕ್ರಿಯಾತ್ಮಕ ಸಾಕ್ಷರತೆ.
- ಓದು ಮುಂದುವರೆಸಲು ಬಯಸುವವರಿಗೆ ಸಮಾನ ಶಿಕ್ಷಣ
- ಜೀವನ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ
- ಜೀವನ ಪರ್ಯಂತರ ಕಲಿಕೆಗೆ ಮುಂದುವರಿಕೆ ಶಿಕ್ಷಣ

**ಆದ್ಯತಾ ವಲಯ:**

- ನಗರ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂತರವನ್ನು ಅಳಿಸಲು ಗ್ರಾಮೀಣ ಪ್ರದೇಶದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- ಪ್ರತಿಯೊಬ್ಬ ಅನಕ್ಷರಸ್ಥ ಮಹಿಳೆಯನ್ನು ಕಲಿಕೆಗೆ ಒಳಪಡಿಸಿ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದ ಅಂತರವನ್ನು ಇಳಿಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಶೋಷಿತ ವರ್ಗದ ಅನಕ್ಷರಸ್ಥರ ಕಲಿಕೆಗೆ ಒತ್ತು ನೀಡುವುದು.
- ಸಾಕ್ಷರತೆಯ ಮೂಲಕ ತಳಸ್ತರದ ಪ್ರಜಾತಂತ್ರ ಸಂಸ್ಥೆಗಳನ್ನು ಬಲಗೊಳಿಸುವುದು
- ಸಾಕ್ಷರತೆಯೊಂದಿಗೆ ವೃತ್ತಿ ಕೌಶಲ ಒದಗಿಸುವುದರ ಮೂಲಕ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಹೆಚ್ಚಳ.

**ಅನುದಾನ:**

- ಮಂಜೂರಾಗಿರುವ ಅನುದಾನ ರೂ. 161.00 ಕೋಟಿ.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ಶೇ.75:25 ರ ಅನುಪಾತ
- ಪ್ರತಿಯೊಬ್ಬ ಕಲಿಕಾರ್ಥಿಯ ಮೂಲ ಸಾಕ್ಷರತೆಯ ಕಲಿಕೆಗೆ ರೂ.230/-
- ಸಮೀಕ್ಷೆ, ತರಬೇತಿ, ಕಲಿಕಾ ಬೋಧನಾ ಸಾಮಗ್ರಿ, ವಾತಾವರಣ ನಿರ್ಮಾಣ, ಪರಿವೀಕ್ಷಣೆ ಮತ್ತು ಆಡಳಿತ ವೆಚ್ಚಗಳನ್ನೊಳಗೊಂಡಿರುತ್ತದೆ.

**ಅನುಷ್ಠಾನ ಮಾರ್ಗೋಪಾಯ ಸಂಸ್ಥೆಗಳು:**

**ನಿರ್ವಹಣಾ ಸಮಿತಿಗಳು:**

- ಕಾರ್ಯಕ್ರಮವನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದವರೆಗೆ ಸಾಂಸ್ಥಿಕ ಚೌಕಟ್ಟನ್ನು ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನೊಳಗೊಂಡು ರಚಿಸಲಾಗಿದೆ.
- ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು ರಾಜ್ಯದ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದ ಪ್ರಧಾನ ಸಂಸ್ಥೆ.
- ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಯ ಲೋಕ ಶಿಕ್ಷಣ ಸಮಿತಿಗಳು ಮೂರು ಹಂತದ ಅನುಷ್ಠಾನ ಸಂಸ್ಥೆಗಳಾಗಿವೆ.
- ಜಿಲ್ಲಾ ಲೋಕ ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷರಾದ ಜಿಲ್ಲಾಧಿಕಾರಿಗಳು ಮತ್ತು ಉಪಾಧ್ಯಕ್ಷರಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಪರಿಣಾಮಕಾರಿ ಅನುಷ್ಠಾನ.

**ಸಹಯೋಗ:**

ಚುನಾಯಿತ ಪ್ರತಿನಿಧಿಗಳು, ಆಡಳಿತಾಧಿಕಾರಿಗಳು, ಮಠ ಮಾನ್ಯಗಳು, ಮಸೀದಿ, ಚರ್ಚುಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮಿಗಳು, ವಿದ್ಯಾವಂತರು, ಸಾಹಿತಿಗಳು, ಕಲಾವಿದರು ಮುಂತಾದವರು ಪಾಲ್ಗೊಂಡು ಸಹಯೋಗ ನೀಡುವುದಾಗಿದೆ.

**ಲೋಕ ಶಿಕ್ಷಣ ಕೇಂದ್ರ:**

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ಲೋಕ ಶಿಕ್ಷಣ ಕೇಂದ್ರ ತೆರೆಯುವುದು. ಇದು ಸಾಕ್ಷರ ಭಾರತ್ ಕಾರ್ಯಕ್ರಮದ ಅಡಿಗಲ್ಲಾಗಿದ್ದು, ಇದು ಹತ್ತು ಹಲವು ಚಟುವಟಿಕೆಗಳಿಗೆ ವೇದಿಕೆಯಾಗಿದೆ. ಈ ಕೇಂದ್ರದ ನಿರ್ವಹಣೆಯನ್ನು ಪ್ರೇರಕರು ಮಾಡುವರು.

**ಕಾರ್ಯನಿರ್ವಾಹಕರು:**

- ರಾಜ್ಯ ಮಟ್ಟದಲ್ಲಿ 5, ಜಿಲ್ಲಾ ಮಟ್ಟದಲ್ಲಿ 72, ತಾಲ್ಲೂಕು ಮಟ್ಟದಲ್ಲಿ 107 ಸಂಯೋಜಕರು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ 6902 ಗೌರವಧನ ಆಧಾರದ ಸ್ವಯಂ ಸೇವಾ ನೆಲೆಯಲ್ಲಿ ಪ್ರೇರಕರು ಕಾರ್ಯನಿರ್ವಹಿಸುವರು.
- ಇವರಿಗೆ ಕಾರ್ಯದಕ್ಷತೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ 10 ದಿವಸಗಳ ಕಾರ್ಯನಿರ್ವಹಣಾ ತರಬೇತಿ ನೀಡಲಾಗುತ್ತದೆ.

**ಸಮೀಕ್ಷೆ:**

- ಗ್ರಾಮಗಳಲ್ಲಿ 15 + ವಯೋಮಾನದ ಅನಕ್ಷರಸ್ಥರು, ಸ್ವಯಂ ಸೇವಕ ಬೋಧಕರು ಮತ್ತು ಕಲಿಕಾ ಕೇಂದ್ರ ನಡೆಸುವ ಸ್ಥಳ ಗುರುತಿಸಲು ಕುಟುಂಬ ಸಮೀಕ್ಷೆ.
- ಒಬ್ಬ ಸ್ವಯಂ ಸೇವಕ 10 ಜನ ಕಲಿಕಾರ್ಥಿಗಳಿಗೆ ಕಲಿಸುವಂತೆ 3.60 ಲಕ್ಷ ಸ್ವಯಂಸೇವಕರ ಹೊಂದಾಣಿಕೆ ಪಟ್ಟಿ

**ತರಬೇತಿ:**

- 300 ಜನ ಸಂಪನ್ಮೂಲ ವ್ಯಕ್ತಿ ಮತ್ತು 7100 ಮುಖ್ಯ ತರಬೇತುದಾರರಿಗೆ 10 ದಿವಸಗಳ ಕಾರ್ಯಕ್ರಮ ಅನುಷ್ಠಾನ ಮತ್ತು ಪಠ್ಯಾಧಾರಿತ ತರಬೇತಿ.
- 3.60 ಲಕ್ಷ ಜನ ಸ್ವಯಂ ಸೇವಕ ಬೋಧಕರಿಗೆ 10 ದಿವಸಗಳ ಪಠ್ಯಾಧಾರಿತ ತರಬೇತಿ.

**ಕಲಿಕಾ ಕೇಂದ್ರ:**

- 10 ಜನ ಕಲಿಕಾರ್ಥಿಗಳ ಕಲಿಕೆಗೆ ಒಂದು ಕಲಿಕಾ ಕೇಂದ್ರ.
- ಕೇಂದ್ರದಲ್ಲಿ  ಕಲಿಕಾ ಬೋಧನಾ ಸಾಮಗ್ರಿಗಳ ವ್ಯವಸ್ಥೆ

**ಕಲಿಕಾ ಅವಧಿ:**

- ಕಲಿಕಾರ್ಥಿ ಮತ್ತು ಸ್ವಯಂ ಸೇವಕ ಬೋಧಕರ ಬಿಡುವಿನ ವೇಳೆಯ 1 1/2 ಗಂಟೆ ಸಂಜೆ/ರಾತ್ರಿ ಕಲಿಕಾ ಬೋಧನಾ ಪ್ರಕ್ರಿಯೆ.
- 6 ತಿಂಗಳ ಅವಧಿಯ 200 ಗಂಟೆಗಳಲ್ಲಿ ಪ್ರಾಥಮಿಕೆಯ ಮೂಲಕ ಓದುಬರಹ ಲೆಕ್ಕಾಚಾರ
- 4 ತಿಂಗಳ ಅವಧಿಯ 100 ಗಂಟೆಗಳಲ್ಲಿ ಸೇತು ಬಂಧ ಪ್ರಾಥಮಿಕೆಯ ಮೂಲಕ ಕಲಿಕೆ ಸ್ಥಿರೀಕರಣ.

**ಕಲಿಕಾ ಸಾಮರ್ಥ್ಯ:**

- ಕಲಿಕಾರ್ಥಿಗಳ ಕಲಿಕಾ ಸಾಮರ್ಥ್ಯ ಅಳೆಯಲು, ಮಾಸಿಕ ಪರೀಕ್ಷೆ ಹಾಗೂ ಅಂತಿಮ ಮೌಲ್ಯಮಾಪನ

**ಪರಿವೀಕ್ಷಣೆ:**

- ಸಮೀಕ್ಷೆ ತರಬೇತಿ, ಮೌಲ್ಯಮಾಪನ ಮತ್ತು ಅನುಷ್ಠಾನಕ್ಕಾಗಿ ಮೇಲ್ಮಟ್ಟದಿಂದ ತಳಸ್ತರದವರೆಗೆ ಮೇಲ್ವಿಚಾರಣೆ.
- ಪರಿಹಾರೋಪಾಯಗಳನ್ನು ಕಂಡುಕೊಂಡು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

**ಸಾಕ್ಷರ ಭಾರತ್ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ**

I. **ರಾಜ್ಯ ಮಟ್ಟದಲ್ಲಿ:** ದಿನಾಂಕ 07.08.2010 ರಂದು ಅಪರಾಹ್ನ 3.00 ಗಂಟೆಗೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉದ್ಘಾಟಿಸಲಾಗುತ್ತದೆ.

ಉದ್ಘಾಟನೆಯ ಸಮಾರಂಭದ ಪೂರ್ವದಲ್ಲಿ 11 ಗಂಟೆಗೆ ಸಾಕ್ಷರತಾ ಮೆರವಣಿಗೆ ಈ ಕೆಳಕಾಣಿಸಿದ ಸ್ಥಳಗಳಿಂದ ಪ್ರಾರಂಭವಾಗಿ 12.30 ಕ್ಕೆ ಕಂಠೀರವ ಒಳಾಂಗಣ ಕ್ರೀಡಾಂಗಣಕ್ಕೆ ಪ್ರವೇಶ. ಸಾಕ್ಷರತಾ ಮೆರವಣಿಗೆಯಲ್ಲಿ ಸಾಕ್ಷರತಾ ಕಾರ್ಯಕರ್ತರು, ಕಲಾ ತಂಡಗಳು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಪಾಲ್ಗೊಳ್ಳುವರು.

1. ಮಹಾನಗರ ಪಾಲಿಕೆ ಪದವಿ ಪೂರ್ವ ಕಾಲೇಜು, ಟಾಸ್ಕರ್ ಟೌನ್, ಶಿವಾಜಿನಗರ.
2. ನೂತನ ವಾಣಿ ವಿಲಾಸ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿ.ವಿ.ಪುರಂ.
3. ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಶೇಷಾದ್ರಿ ರಸ್ತೆ.

II. **ಜಿಲ್ಲಾ ಮಟ್ಟದಲ್ಲಿ:** ದಿನಾಂಕ 08/09.08.2010 ರಂದು 18 ಜಿಲ್ಲೆಗಳಲ್ಲಿ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳಿಂದ ಉದ್ಘಾಟಿಸಲಾಗುವುದು.

III. **ತಾಲ್ಲೂಕು ಮಟ್ಟದಲ್ಲಿ:** ದಿನಾಂಕ 10/11.08.2010 ರಂದು 107 ತಾಲ್ಲೂಕುಗಳಲ್ಲಿ ಸನ್ಮಾನ್ಯ ಶಾಸಕರುಗಳಿಂದ ಉದ್ಘಾಟಿಸಲಾಗುವುದು.

IV. **ಗ್ರಾಮ ಪಂಚಾಯಿತಿ ಮಟ್ಟದಲ್ಲಿ:** ದಿನಾಂಕ 12/13/14.08.2010 ರಂದು 3451 ಗ್ರಾಮ ಪಂಚಾಯಿತಿಗಳಲ್ಲಿ ಸನ್ಮಾನ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಂದ ಉದ್ಘಾಟಿಸಲಾಗುವುದು.

**************

ಕರ್ನಾಟಕ ಸರ್ಕಾರ

**ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ/ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.**

(ಲೀಫ್ ಲೆಟ್)

# ಸಾಕ್ಷರ ಭಾರತ್ – ಸಾಕ್ಷರ ಕರ್ನಾಟಕ

## 2010–2012

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸು ಸ್ವಾತಂತ್ರ್ಯ. ಜನಾಂದೋಲನ ಮಾಡಿ ನನಸುಗೊಳಿಸಿದರು. ಪ್ರಜಾತಂತ್ರ ಜಾರಿಗೆ ಬಂದಿತು. ಸ್ವಾತಂತ್ರ್ಯೋತ್ತರದ ಅವರ ಆಶಯ ದೇಶಕ್ಕೆ ತಗುಲಿದ ಬಹುಸಂಖ್ಯಾತ ಅನಕ್ಷರತೆಯನ್ನು ತೊಡೆದು ಹಾಕುವುದರ ಮೂಲಕ ಗ್ರಾಮ, ರಾಜ್ಯ, ಮಹಿಳಾ ಸಬಲೀಕರಣ ಮತ್ತು ಶೋಷಿತ ವರ್ಗದ ಏಳಿಗೆ ಆಗಿತ್ತು. ಈ ದಿಸೆಯಲ್ಲಿ **ಸಾಕ್ಷರ ಭಾರತ್ ಸಾಕ್ಷರ ಕರ್ನಾಟಕ** ಕಾರ್ಯಕ್ರಮವನ್ನು ಜನಾಂದೋಲನ ಮಾಡಬೇಕಾಗಿದೆ.

ಕರ್ನಾಟಕವು ಪ್ರಗತಿಯ ಹಾದಿಯಲ್ಲಿ ದಾಪುಗಾಲಿಡುತ್ತಾ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. 2001 ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 66.64 ರಷ್ಟಿದ್ದು, ದೇಶದ ಸಾಕ್ಷರತೆಗಿಂತ ತುಸು ಮುಂದಿದೆ.

## ನಮ್ಮ ಧ್ಯೇಯ ಸಾಕ್ಷರ ಕರ್ನಾಟಕ

ನದಿ, ಕೊಳ, ಖನಿಜ–ಅರಣ್ಯಗಳಿಂದ ತುಂಬಿದ ಶ್ರೀಗಂಧದ ನಾಡು – ನಮ್ಮ ನಾಡು ಕನ್ನಡ ನಾಡು ಸಾಕ್ಷರ ನಾಡು ಸಮೃದ್ಧಿಯ ಬೀಡಾಗಲು ಜನ ಸಾಕ್ಷರತೆ ಪಡೆದು ಸಂಪನ್ಮೂಲರಾಗಬೇಕು. ನಾಡಿನ ಸಂಪತ್ತನ್ನು ಉಳಿಸಿ, ಬೆಳೆಸುವ ಹರಿಕಾರರಾಗಬೇಕು. ಸಾಕ್ಷರ ಕರ್ನಾಟಕ ನನಸುಗೊಳಿಸಿ ಸಮಗ್ರ ಅಭಿವೃದ್ಧಿ ಸಾಧಿಸಲು ಮಹತ್ವಾಕಾಂಕ್ಷಿ **'ಸಾಕ್ಷರ ಭಾರತ್'** ಕಾರ್ಯಕ್ರಮದಲ್ಲಿ ನಾವೆಲ್ಲ ಲಿಂಗಭೇದವಿಲ್ಲದೆ ಜಾತ್ಯಾತೀತ, ವರ್ಗಾತೀತ, ಪಕ್ಷಾತೀತರಾಗಿ ಪಾಲ್ಗೊಂಡು ಸಾಕ್ಷರ ಆಂದೋಲನ ಮಾಡೋಣ. **"ಕನ್ನಡ ನಾಡು ಸಾಕ್ಷರ ನಾಡು"** ಕಟ್ಟೋಣ.

ಮಹಿಳಾ ಸಾಕ್ಷರತಾ ಪ್ರಮಾಣ ಶೇ. 50 ಕ್ಕಿಂತ ಕಡಿಮೆ ಇರುವ ರಾಜ್ಯದ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ರಾಮನಗರ, ಬಳ್ಳಾರಿ, ಬೀದರ್, ಬಿಜಾಪುರ, ಬೆಳಗಾಂ, ಚಿತ್ರದುರ್ಗ, ಹಾವೇರಿ, ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ಮೈಸೂರು, ಮಂಡ್ಯ, ಚಾಮರಾಜನಗರ, ರಾಯಚೂರು, ತುಮಕೂರು, ಗದಗ ಈ 18 ಜಿಲ್ಲೆಗಳಲ್ಲಿ **'ಸಾಕ್ಷರ ಕರ್ನಾಟಕ'** ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

## ಗುರಿ

ಈ ಕಾರ್ಯಕ್ರಮವು 18 ಜಿಲ್ಲೆಗಳ 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ, ಉಪಗ್ರಾಮಗಳ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದಾಗಿದೆ. ಉತ್ಪಾದನಾ ರಂಗದಲ್ಲಿ ತೊಡಗಿರುವ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರಿಗೆ ಮೂಲ ಸಾಕ್ಷರತೆ ಕಲ್ಪಿಸುವುದಾಗಿದೆ.

## ಉದ್ದೇಶ

- ಅನಕ್ಷರಸ್ಥರ ಕಲಿಕೆಗೆ ಕ್ರಿಯಾತ್ಮಕ ಸಾಕ್ಷರತೆ.
- ಓದು ಮುಂದುವರೆಸಲು ಬಯಸುವವರಿಗೆ ಸಮಾನ ಶಿಕ್ಷಣ
- ಜೀವನ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ
- ಜೀವನ ಪರ್ಯಂತರ ಕಲಿಕೆಗೆ ಮುಂದುವರಿಕೆ ಶಿಕ್ಷಣ

## ಆದ್ಯತಾ ವಲಯ

- ನಗರ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂತರವನ್ನು ಅಳಿಸಲು ಗ್ರಾಮೀಣ ಪ್ರದೇಶದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- ಪ್ರತಿಯೊಬ್ಬ ಅನಕ್ಷರಸ್ಥ ಮಹಿಳೆಯನ್ನು ಕಲಿಕೆಗೆ ಒಳಪಡಿಸಿ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದ ಅಂತರವನ್ನು ಇಳಿಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಶೋಷಿತ ವರ್ಗದ ಅನಕ್ಷರಸ್ಥರ ಕಲಿಕೆಗೆ ಒತ್ತು ನೀಡುವುದು.
- ಸಾಕ್ಷರತೆಯ ಮೂಲಕ ತಳಸ್ತರದ ಪ್ರಜಾತಂತ್ರ ಸಂಸ್ಥೆಗಳನ್ನು ಬಲಗೊಳಿಸುವುದು
- ಸಾಕ್ಷರತೆಯೊಂದಿಗೆ ವೃತ್ತಿ ಕೌಶಲ ಒದಗಿಸುವುದರ ಮೂಲಕ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಹೆಚ್ಚಳ.

ಈ ಮಹತ್ವದ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಇಲಾಖಾ ಅಧಿಕಾರಿಗಳು, ಮಠ ಮಾನ್ಯಗಳು, ಮಸೀದಿ, ಚರ್ಚುಗಳು, ಸಾಹಿತಿಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮಿಗಳು, ವಿದ್ಯಾವಂತರು, ಶಿಕ್ಷಕರು, ಕಲಾವಿದರು ಪಾಲ್ಗೊಂಡು ಸಂಪೂರ್ಣ ಸಾಕ್ಷರ ಕರ್ನಾಟಕವನ್ನಾಗಿಸಲು ಸಹಭಾಗಿತ್ವವನ್ನು ನೀಡಬೇಕೆಂದು ಆಶಿಸಲಾಗಿದೆ.

*****

**ಕರ್ನಾಟಕ ಸರ್ಕಾರ**

**ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ/ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.**

**(ಫೋಲ್ಡರ್)**

## ಸಾಕ್ಷರ ಭಾರತ್ – ಸಾಕ್ಷರ ಕರ್ನಾಟಕ

**2010–2012**

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸು ಸ್ವಾತಂತ್ರ್ಯ. ಜನಾಂದೋಲನ ಮಾಡಿ ನನಸುಗೊಳಿಸಿದರು. ಪ್ರಜಾತಂತ್ರ ಜಾರಿಗೆ ಬಂದಿತು. ಸ್ವಾತಂತ್ರ್ಯೋತ್ತರದ ಅವರ ಆಶಯ ದೇಶಕ್ಕೆ ತಗುಲಿದ ಬಹುಸಂಖ್ಯಾತ ಅನಕ್ಷರತೆಯನ್ನು ತೊಡೆದು ಹಾಕುವುದರ ಮೂಲಕ ಗ್ರಾಮ, ರಾಜ್ಯ, ಮಹಿಳಾ ಸಬಲೀಕರಣ ಮತ್ತು ಶೋಷಿತ ವರ್ಗದ ಏಳಿಗೆ ಆಗಿತ್ತು. ಈ ದಿಸೆಯಲ್ಲಿ **ಸಾಕ್ಷರ ಭಾರತ್ ಸಾಕ್ಷರ ಕರ್ನಾಟಕ** ಕಾರ್ಯಕ್ರಮವನ್ನು ಜನಾಂದೋಲನ ಮಾಡಬೇಕಾಗಿದೆ.

ಕರ್ನಾಟಕವು ಪ್ರಗತಿಯ ಹಾದಿಯಲ್ಲಿ ದಾಪುಗಾಲಿಡುತ್ತಾ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. 2001 ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 66.64 ರಷ್ಟಿದ್ದು, ದೇಶದ ಸಾಕ್ಷರತೆಗಿಂತ ತುಸು ಮುಂದಿದೆ.

## ನಮ್ಮ ಧ್ಯೇಯ ಸಾಕ್ಷರ ಕರ್ನಾಟಕ

ನದಿ, ಕೊಳ, ಖನಿಜ–ಅರಣ್ಯಗಳಿಂದ ತುಂಬಿದ ಶ್ರೀಗಂಧದ ನಾಡು – ನಮ್ಮ ನಾಡು ಕನ್ನಡ ನಾಡು ಸಾಕ್ಷರ ನಾಡು ಸಮೃದ್ಧಿಯ ಬೀಡಾಗಲು ಜನ ಸಾಕ್ಷರತೆ ಪಡೆದು ಸಂಪನ್ಮೂಲರಾಗಬೇಕು. ನಾಡಿನ ಸಂಪತ್ತನ್ನು ಉಳಿಸಿ, ಬೆಳೆಸುವ ಹರಿಕಾರರಾಗಬೇಕು. ಸಾಕ್ಷರ ಕರ್ನಾಟಕ ನನಸುಗೊಳಿಸಿ ಸಮಗ್ರ ಅಭಿವೃದ್ಧಿ ಸಾಧಿಸಲು ಮಹತ್ವಾಕಾಂಕ್ಷಿ **'ಸಾಕ್ಷರ ಭಾರತ್'** ಕಾರ್ಯಕ್ರಮದಲ್ಲಿ ನಾವೆಲ್ಲ ಲಿಂಗಭೇದವಿಲ್ಲದೆ ಜಾತ್ಯಾತೀತ, ವರ್ಗಾತೀತ, ಪಕ್ಷಾತೀತರಾಗಿ ಪಾಲ್ಗೊಂಡು ಸಾಕ್ಷರ ಆಂದೋಲನ ಮಾಡೋಣ. **"ಕನ್ನಡ ನಾಡು ಸಾಕ್ಷರ ನಾಡು"** ಕಟ್ಟೋಣ.

ಮಹಿಳಾ ಸಾಕ್ಷರತಾ ಪ್ರಮಾಣ ಶೇ. 50 ಕ್ಕಿಂತ ಕಡಿಮೆ ಇರುವ ರಾಜ್ಯದ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ರಾಮನಗರ, ಬಳ್ಳಾರಿ, ಬೀದರ್, ಬಿಜಾಪುರ, ಬೆಳಗಾಂ, ಚಿತ್ರದುರ್ಗ, ಹಾವೇರಿ, ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ಮೈಸೂರು, ಮಂಡ್ಯ, ಚಾಮರಾಜನಗರ, ರಾಯಚೂರು, ತುಮಕೂರು, ಗದಗ ಈ 18 ಜಿಲ್ಲೆಗಳಲ್ಲಿ **'ಸಾಕ್ಷರ ಕರ್ನಾಟಕ'** ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

## ಗುರಿ

ಈ ಕಾರ್ಯಕ್ರಮವು 18 ಜಿಲ್ಲೆಗಳ 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ, ಉಪಗ್ರಾಮಗಳ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದಾಗಿದೆ. ಉತ್ಪಾದನಾ ರಂಗದಲ್ಲಿ ತೊಡಗಿರುವ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರಿಗೆ ಮೂಲ ಸಾಕ್ಷರತೆ ಕಲ್ಪಿಸುವುದಾಗಿದೆ.

## ಉದ್ದೇಶ

- ಅನಕ್ಷರಸ್ಥರ ಕಲಿಕೆಗೆ ಕ್ರಿಯಾತ್ಮಕ ಸಾಕ್ಷರತೆ.
- ಓದು ಮುಂದುವರೆಸಲು ಬಯಸುವವರಿಗೆ ಸಮಾನ ಶಿಕ್ಷಣ
- ಜೀವನ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ
- ಜೀವನ ಪರ್ಯಂತರ ಕಲಿಕೆಗೆ ಮುಂದುವರಿಕೆ ಶಿಕ್ಷಣ

## ಆದ್ಯತಾ ವಲಯ

- ನಗರ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂತರವನ್ನು ಅಳಿಸಲು ಗ್ರಾಮೀಣ ಪ್ರದೇಶದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- ಪ್ರತಿಯೊಬ್ಬ ಅನಕ್ಷರಸ್ಥ ಮಹಿಳೆಯನ್ನು ಕಲಿಕೆಗೆ ಒಳಪಡಿಸಿ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದ ಅಂತರವನ್ನು ಇಳಿಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ  ಮತ್ತು ಶೋಷಿತ ವರ್ಗದ ಅನಕ್ಷರಸ್ಥರ ಕಲಿಕೆಗೆ ಒತ್ತು ನೀಡುವುದು.
- ಸಾಕ್ಷರತೆಯ ಮೂಲಕ ತಳಸ್ತರದ ಪ್ರಜಾತಂತ್ರ ಸಂಸ್ಥೆಗಳನ್ನು ಬಲಗೊಳಿಸುವುದು
- ಸಾಕ್ಷರತೆಯೊಂದಿಗೆ ವೃತ್ತಿ ಕೌಶಲ ಒದಗಿಸುವುದರ ಮೂಲಕ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಹೆಚ್ಚಳ.

## ಅನುಷ್ಠಾನ ಮಾರ್ಗೋಪಾಯ ಸಂಸ್ಥೆಗಳು

### ನಿರ್ವಹಣಾ ಸಮಿತಿಗಳು

- ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು ರಾಜ್ಯದ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದ ಪ್ರಧಾನ ಸಂಸ್ಥೆಯಾಗಿದೆ.
- ಕಾರ್ಯಕ್ರಮವನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಾದ ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿ  ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದವರೆಗೆ ರಚಿಸಲಾದ ಲೋಕ ಶಿಕ್ಷಣ ಸಮಿತಿಗಳ ಮುಂದಾಳತ್ವದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ.
- ಜಿಲ್ಲಾ ಲೋಕ ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷರಾದ ಜಿಲ್ಲಾಧಿಕಾರಿಗಳು ಮತ್ತು ಉಪಾಧ್ಯಕ್ಷರಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಪರಿಣಾಮಕಾರಿ ಅನುಷ್ಠಾನ.

### ಸಹಯೋಗ ಮತ್ತು ಒಗ್ಗೂಡಿಸುವಿಕೆ

ಚುನಾಯಿತ ಪ್ರತಿನಿಧಿಗಳು, ಅಭಿವೃದ್ಧಿ ಇಲಾಖೆಗಳು,  ಸ್ವಯಂ ಸೇವಾ ಸಂಸ್ಥೆಗಳು, ರಾಜ್ಯ ಸಂಪನ್ಮೂಲ ಕೇಂದ್ರ, ಜನ ಶಿಕ್ಷಣ ಸಂಸ್ಥಾನಗಳ ಸಹಯೋಗ. ಸಾಕ್ಷರತಾ ಕಾರ್ಯಕ್ರಮವನ್ನು ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವುದು.

### ಲೋಕ ಶಿಕ್ಷಣ ಕೇಂದ್ರ

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ಲೋಕ ಶಿಕ್ಷಣ ಕೇಂದ್ರ ತೆರೆಯುವುದು. ಇದು ಸಾಕ್ಷರ ಭಾರತ್ ಕಾರ್ಯಕ್ರಮದ ಅಡಿಗಲ್ಲಾಗಿದ್ದು, ಹತ್ತು ಹಲವು ಕಲಿಕಾ ಚಟುವಟಿಕೆಗಳಿಗೆ ವೇದಿಕೆಯಾಗಿದೆ. ಈ ಕೇಂದ್ರದ ನಿರ್ವಹಣೆಯನ್ನು ಪ್ರೇರಕರು ಮಾಡುವರು.

### ಕಾರ್ಯನಿರ್ವಾಹಕರು

- ರಾಜ್ಯ ಮಟ್ಟದಲ್ಲಿ 5, ಜಿಲ್ಲಾ ಮಟ್ಟದಲ್ಲಿ 72, ತಾಲ್ಲೂಕು ಮಟ್ಟದಲ್ಲಿ 107 ಸಂಯೋಜಕರು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ 6902 ಪ್ರೇರಕರು ಗೌರವಧನ ಆಧಾರದ ಸ್ವಯಂ ಸೇವಾ ನೆಲೆಯಲ್ಲಿ ಕಾರ್ಯನಿರ್ವಹಿಸುವರು.
- ಇವರಿಗೆ ಕಾರ್ಯದಕ್ಷತೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ 10 ದಿವಸಗಳ ಕಾರ್ಯನಿರ್ವಹಣಾ ತರಬೇತಿ ನೀಡಲಾಗುತ್ತದೆ.

**ಸಮೀಕ್ಷೆ**

- ಗ್ರಾಮಗಳಲ್ಲಿ 15 + ಅನಕ್ಷರಸ್ಥರು, ಸ್ವಯಂ ಸೇವಕ ಬೋಧಕರು ಮತ್ತು ಕಲಿಕಾ ಕೇಂದ್ರ ನಡೆಸುವ ಸ್ಥಳ ಗುರುತಿಸಲು ಕುಟುಂಬ ಸಮೀಕ್ಷೆ ನಡೆಸುವುದು.
- ಒಬ್ಬ ಸ್ವಯಂ ಸೇವಕ 10 ಜನ ಕಲಿಕಾರ್ಥಿಗಳಿಗೆ ಕಲಿಸುವಂತೆ 36 ಲಕ್ಷ ಕಲಿಕಾರ್ಥಿಗಳ ಮತ್ತು 3.60 ಲಕ್ಷ ಸ್ವಯಂಸೇವಕರ ಹೊಂದಾಣಿಕೆ ಪಟ್ಟಿ ತಯಾರಿಸುವುದು.

**ತರಬೇತಿ**

- 300 ಜನ ಸಂಪನ್ಮೂಲ ವ್ಯಕ್ತಿ ಮತ್ತು 7100 ಮುಖ್ಯ ತರಬೇತುದಾರರಿಗೆ 10 ದಿವಸಗಳ ಕಾರ್ಯಕ್ರಮ ಪರಿಚಯ ಮತ್ತು ಪಠ್ಯಾಧಾರಿತ ತರಬೇತಿ.
- ಕಲಿಕಾರ್ಥಿಗಳು ಕೇಂದ್ರಗಳಿಗೆ ಆಸಕ್ತಿಯಿಂದ ಬರುವಂತೆ ಪರಿಣಾಮಕಾರಿಯಾಗಿ ಬೋಧಿಸುವ ಬೋಧನಾ ತರಬೇತಿಯನ್ನು 3.60 ಲಕ್ಷ ಜನ ಸ್ವಯಂ ಸೇವಕ ಬೋಧಕರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡುವುದು.

**ಕಲಿಕಾ ಕೇಂದ್ರ**

- 10 ಜನ ಕಲಿಕಾರ್ಥಿಗಳ ಕಲಿಕೆಗೆ ಕಲಿಕಾ ಕೇಂದ್ರ.
- ಕೇಂದ್ರದಲ್ಲಿ  ಕಲಿಕಾ ಬೋಧನಾ ಸಾಮಗ್ರಿಗಳ ವ್ಯವಸ್ಥೆ
- ಅನಕ್ಷರಸ್ಥರಿಗೆ ಓದು ಬರಹ ಕೇವಲ 200 ಗಂಟೆಗಳ ಅವಧಿಗಳಲ್ಲಿ ಕಲಿಸಿ ಅರಿವು ಮೂಡಿಸಲಾಗುತ್ತದೆ.

**ಕಲಿಕಾ ಅವಧಿ:**

- ಕಲಿಕಾರ್ಥಿ ಮತ್ತು ಸ್ವಯಂ ಸೇವಕ ಬೋಧಕರ ಬಿಡುವಿನ ವೇಳೆಯ 1 1/2 ಗಂಟೆ ಸಂಜೆ/ರಾತ್ರಿ ಕಲಿಕಾ ಬೋಧನಾ ಪ್ರಕ್ರಿಯೆ.
- 6 ತಿಂಗಳ ಅವಧಿಯ 200 ಗಂಟೆಗಳಲ್ಲಿ ಪ್ರಾಥಮಿಕೆ ಮೂಲಕ ಓದುಬರಹ ಲೆಕ್ಕಾಚಾರ
- 4 ತಿಂಗಳ ಅವಧಿಯ 100 ಗಂಟೆಗಳಲ್ಲಿ ಸೇತು ಬಂಧ ಪ್ರಾಥಮಿಕೆಯ ಮೂಲಕ ಕಲಿಕೆ ಸ್ಥಿರೀಕರಣ.

**ಕಲಿಕಾ ವಾತಾವರಣ ನಿರ್ಮಾಣ:**

ಸಾಕ್ಷರತಾ ಕಾರ್ಯಕ್ರಮದ ಮುಖ್ಯ ಗುರಿ  ಕಲಿಕಾ ಕೇಂದ್ರದಲ್ಲಿ ಅನಕ್ಷರಸ್ಥರು ಕಲಿಯುವ ಮತ್ತು ಸ್ವಯಂ ಸೇವಕರು ಬೋಧಿಸುವ  ನಿರಂತರ ಪ್ರಕ್ರಿಯೆ ನಡೆದು ಸಾಕ್ಷರಸ್ಥರನ್ನಾಗಿಸುವುದು. ಇದಕ್ಕೆ ಪೂರಕ ಕಲಿಕಾ ವಾತಾವರಣ ನಿರ್ಮಾಣಕ್ಕಾಗಿ ಮಠ ಮಾನ್ಯಗಳು, ಮಸೀದಿ, ಚರ್ಚುಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮಿಗಳು, ವಿದ್ಯಾವಂತರು, ಸಾಹಿತಿಗಳು, ಕಲಾವಿದರು ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿದೆ.

- ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳ ಸಭೆ ನಡೆಸಿ ಕಾರ್ಯಕ್ರಮದ ವಿಷಯ ಪರಿಚಯ ಮಾಡಿಸುವುದು.
- ಸರ್ಕಾರದ ಅಭಿವೃದ್ಧಿ ಯೋಜನೆ ಅನುಷ್ಠಾನದಲ್ಲಿ ಪಾಲ್ಗೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು, ಕಲಿಕಾ ಕೇಂದ್ರಗಳಿಗೆ ಭೇಟಿ ನೀಡಿ ಪ್ರೇರೇಪಿಸುವುದು.

**ಕಲಿಕಾ ಸಾಮರ್ಥ್ಯ:**

- ಕಲಿಕಾರ್ಥಿಗಳ ಕಲಿಕಾ ಸಾಮರ್ಥ್ಯ ಅಳೆಯಲು, ಮಾಸಿಕ ಪರೀಕ್ಷೆ ಹಾಗೂ ಅಂತಿಮ ಮೌಲ್ಯಮಾಪನ

**ಪರಿವೀಕ್ಷಣೆ:**

- ಸಮೀಕ್ಷೆ ತರಬೇತಿ, ಮೌಲ್ಯಮಾಪನ ಮತ್ತು ಅನುಷ್ಠಾನಕ್ಕಾಗಿ ಮೇಲ್ಮಟ್ಟದಿಂದ ತಳಸ್ತರದವರೆಗೆ ಪರಿವೀಕ್ಷಣೆ.
- ಪರಿಹಾರೋಪಾಯಗಳನ್ನು ಕಂಡುಕೊಂಡು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

**ಅನುದಾನ:**

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ಶೇ.75:25 ರ ಅನುಪಾತ
- ಪ್ರತಿಯೊಬ್ಬ ಕಲಿಕಾರ್ಥಿಯ ಮೂಲ ಸಾಕ್ಷರತೆಯ ಕಲಿಕೆಗೆ ರೂ.230/-
- ಸಮೀಕ್ಷೆ, ತರಬೇತಿ, ಕಲಿಕಾ ಬೋಧನಾ ಸಾಮಗ್ರಿ, ವಾತಾವರಣ ನಿರ್ಮಾಣ, ಪರಿವೀಕ್ಷಣೆ ಮತ್ತು ಆಡಳಿತ ವೆಚ್ಚಗಳನ್ನೊಳಗೊಂಡಿರುತ್ತದೆ.

ಕತ್ತಲೆ ತೊಲಗಿಸಲು ಹಣತೆಯೇ ಸಾಧನ. ಅಜ್ಞಾನ, ಅನಾರೋಗ್ಯ, ಬಡತನ, ದಾರಿದ್ರ್ಯ, ಜಡತ್ವವನ್ನು ಹೋಗಲಾಡಿಸಲು ಸಾಕ್ಷರತೆಯೇ ಸಾಧನ. ಸಾಕ್ಷರತೆ ವ್ಯಕ್ತಿತ್ವ ವಿಕಸನಕ್ಕೆ ಮಹಾದ್ವಾರ, ಮಾನವ ಸಂಪನ್ಮೂಲ ಅಭಿವೃದ್ಧಿಯ ಮಹಾ ಬೆಳಕು, ಸರ್ವತೋಮುಖ ಅಭಿವೃದ್ಧಿಯ ಸಾಕ್ಷಾತ್ಕಾರ. ಬನ್ನಿ ಬಾಂಧವರೇ, ಇಂತಹ ಸಾಕ್ಷರತೆ ರಾಜ್ಯದ 36 ಲಕ್ಷ ಅನಕ್ಷರಸ್ಥರು ಪಡೆದು ರಾಜ್ಯದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳೋಣ. ಕನ್ನಡ ನಾಡು – ಸಾಕ್ಷರ ನಾಡು ಕಟ್ಟೋಣ.

&&&&&&&&&&

**ಕರ್ನಾಟಕ ಸರ್ಕಾರ**

**ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ/ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.**

## ಸಾಕ್ಷರ ಭಾರತ್

**ಮಹಾತ್ಮಾ ಗಾಂಧೀಜಿಯವರ ಆಶಯ**

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸು ಸ್ವಾತಂತ್ರ್ಯ. ಜನಾಂದೋಲನ ಮಾಡಿ ನನಸುಗೊಳಿಸಿದರು. ಪ್ರಜಾತಂತ್ರ ಜಾರಿಗೆ ಬಂದಿತು. ಸ್ವಾತಂತ್ರ್ಯೋತ್ತರದ ಅವರ ಆಶಯ ದೇಶಕ್ಕೆ ತಗುಲಿದ ಬಹುಸಂಖ್ಯಾತ ಅನಕ್ಷರತೆಯನ್ನು ತೊಡೆದು ಹಾಕುವುದರ ಮೂಲಕ ಗ್ರಾಮ ರಾಜ್ಯ, ಮಹಿಳಾ ಸಬಲೀಕರಣ ಮತ್ತು ಶೋಷಿತ ವರ್ಗದ ಏಳಿಗೆ ಆಗಿತ್ತು. ಅವರ ಆಶಯವನ್ನು ಈಡೇರಿಸಲು ಸಾಕ್ಷರ ಭಾರತ್ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ.

**ಅನಕ್ಷರತೆಯ ಶಾಪ**

ಅನಕ್ಷರತೆ ಒಂದು ಮಹಾ ಪಿಡುಗು. ಜನಸಂಖ್ಯೆ ಹೆಚ್ಚಿದಂತೆ ಅನಕ್ಷರಸ್ಥರ ಸಂಖ್ಯೆ ಹೆಚ್ಚಿಸುವುದು. ಅನಕ್ಷರತೆಯು ಅಜ್ಞಾನ ಅನಾರೋಗ್ಯ ಬಡತನ ದಾರಿದ್ರ್ಯಗಳ ಮನೆ. ಜನ ಸಾಕ್ಷರಸ್ಥರಾಗದೇ ಇದ್ದ ಸ್ಥಿತಿಯಲ್ಲಿಯೇ ಮುಂದುವರೆಯುವರು. ಅವರಿಗೆ ಮುಂದಾಲೋಚನೆ, ಅಭಿವೃದ್ಧಿ ವಿಚಾರಗಳು ಹೊಳೆಯಲಾರವು. ಬದಲಾವಣೆ ಬಯಸರು. ಅಭಿವೃದ್ಧಿಯ ಮಾರ್ಗ ತಿಳಿಯರು.

**ಸಾಕ್ಷರತೆಯ ಬೆಳಕು**

ಕತ್ತಲೆ ತೊಲಗಿಸಲು ಹಣತೆಯೇ ಸಾಧನ. ಅಜ್ಞಾನ, ಅನಾರೋಗ್ಯ, ಬಡತನ, ದಾರಿದ್ರ್ಯ, ಜಡತ್ವವನ್ನು ಹೋಗಲಾಡಿಸಲು ಸಾಕ್ಷರತೆಯೇ ಸಾಧನ. ಸಾಕ್ಷರತೆ ವ್ಯಕ್ತಿತ್ವ ವಿಕಸನಕ್ಕೆ ಮಹಾದ್ವಾರ, ಮಾನವ ಸಂಪನ್ಮೂಲ ಅಭಿವೃದ್ಧಿಯ ಮಹಾ ಬೆಳಕು, ಸರ್ವತೋಮುಖ ಅಭಿವೃದ್ಧಿಯ ಸಾಕ್ಷಾತ್ಕಾರ.

**ಸಾಕ್ಷರತೆಯಲ್ಲಿ ನಮ್ಮ ಸ್ಥಾನ**

ಕರ್ನಾಟಕವು ಪ್ರಗತಿಯ ಹಾದಿಯಲ್ಲಿ ದಾಪುಗಾಲಿಡುತ್ತಾ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. 2001 ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 66.64 ರಷ್ಟಿದ್ದು, ದೇಶದ ಸಾಕ್ಷರತೆಗಿಂತ ತುಸು ಮುಂದಿದೆ. ನೆರೆಯ ಕೇರಳ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 91 ರಷ್ಟು ಇದ್ದು, ಸಾಕ್ಷರತೆಯಲ್ಲಿ ಪ್ರಥಮ ಸ್ಥಾನ. ನಮ್ಮದು 21 ನೇ ಸ್ಥಾನ. ನಾವೆಷ್ಟು ಹಿಂದುಳಿದಿದ್ದೇವೆ ಎಂಬುದನ್ನು ಎತ್ತಿ ತೋರಿಸುತ್ತದೆ.

**ಸಾಕ್ಷರ ಭಾರತ್**

ಸಾಕ್ಷರ ಭಾರತ್ ಇದೊಂದು ಮಹತ್ವಾಕಾಂಕ್ಷಿ ಕಾರ್ಯಕ್ರಮ. ಇದು ಸಮಗ್ರ ಮತ್ತು ವ್ಯಾಪಕ ಕಾರ್ಯಕ್ರಮವಾಗಿದೆ. ಮಹಿಳಾ ಸಾಕ್ಷರತಾ ಪ್ರಮಾಣ ಶೇ. 50 ಕ್ಕಿಂತ ಕಡಿಮೆ ಇರುವ 26 ರಾಜ್ಯಗಳ 365 ಜಿಲ್ಲೆಗಳಲ್ಲಿ ಬರುವ 1,70,000 ಗ್ರಾಮಗಳಲ್ಲಿ ಅನುಷ್ಠಾನಗೊಳ್ಳಬೇಕಿದೆ. 15 + ವರ್ಷ ವಯೋಮಾನದ 70 ದಶಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಬೇಕಿದೆ. ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಕರ್ನಾಟಕವು ಹಮ್ಮಿಕೊಂಡ ಸಾಕ್ಷರ ಭಾರತ್ ಕಾರ್ಯಕ್ರಮ ಯಶಸ್ವಿಗೊಳಿಸೋಣ.

**ನಮ್ಮ ಧ್ಯೇಯ ಸಾಕ್ಷರ ಕರ್ನಾಟಕ**

ನದಿ, ಕೊಳ, ಕೆರೆಕುಂಟೆ, ಖನಿಜ–ಅರಣ್ಯಗಳಿಂದ ತುಂಬಿದ ನಾಡು, ನಮ್ಮ ನಾಡು ಕನ್ನಡ ನಾಡು, ಸಾಕ್ಷರ ನಾಡು ಸಮೃದ್ಧಿಯ ಬೀಡಾಗಲು ಜನ ಸಾಕ್ಷರತೆ ಪಡೆದು ಸಂಪನ್ಮೂಲರಾಗಬೇಕು. ನಾಡಿನ ಸಂಪತ್ತನ್ನು ಉಳಿಸಿ, ಬೆಳೆಸುವ ಹರಿಕಾರರಾಗಬೇಕು. ಸಾಕ್ಷರ ಕರ್ನಾಟಕ ನನಸುಗೊಳಿಸಿ ಸಮಗ್ರ ಅಭಿವೃದ್ಧಿ ಸಾಧಿಸಲು ಮಹತ್ವಾಕಾಂಕ್ಷಿ **'ಸಾಕ್ಷರ ಭಾರತ್'** ಕಾರ್ಯಕ್ರಮದಲ್ಲಿ ನಾವೆಲ್ಲ

ಲಿಂಗಭೇದವಿಲ್ಲದೆ ಜಾತ್ಯಾತೀತ, ವರ್ಗಾತೀತ, ಪಕ್ಷಾತೀತರಾಗಿ ಪಾಲ್ಗೊಂಡು ಸಾಕ್ಷರ ಆಂದೋಲನ ಮಾಡೋಣ. **"ಕನ್ನಡ ನಾಡು ಸಾಕ್ಷರ ನಾಡು"** ಕಟ್ಟೋಣ.

ರಾಜ್ಯದ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ರಾಮನಗರ, ಬಳ್ಳಾರಿ, ಬೀದರ್, ಬಿಜಾಪುರ, ಬೆಳಗಾಂ, ಚಿತ್ರದುರ್ಗ, ಹಾವೇರಿ, ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ಮೈಸೂರು, ಮಂಡ್ಯ, ಚಾಮರಾಜನಗರ, ರಾಯಚೂರು, ತುಮಕೂರು, ಗದಗ ಈ 18 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

**ಗುರಿ**

ಈ ಕಾರ್ಯಕ್ರಮವು 18 ಜಿಲ್ಲೆಗಳ 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ, ಉಪಗ್ರಾಮಗಳ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದಾಗಿದೆ. ಉತ್ಪಾದನಾ ರಂಗದಲ್ಲಿ ತೊಡಗಿರುವ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರಿಗೆ ಮೂಲ ಸಾಕ್ಷರತೆ ಕಲ್ಪಿಸುವುದು.

**ಉದ್ದೇಶ**

- ಅನಕ್ಷರಸ್ಥರ ಕಲಿಕೆಗೆ ಕ್ರಿಯಾತ್ಮಕ ಸಾಕ್ಷರತೆ.
- ಓದು ಮುಂದುವರೆಸಲು ಬಯಸುವವರಿಗೆ ಸಮಾನ ಶಿಕ್ಷಣ
- ಜೀವನ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ
- ಜೀವನ ಪರ್ಯಂತರ ಕಲಿಕೆಗೆ ಮುಂದುವರಿಕೆ ಶಿಕ್ಷಣ

**ಆದ್ಯತಾ ವಲಯ**

- ನಗರ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂತರವನ್ನು ಅಳಿಸಲು ಗ್ರಾಮೀಣ ಪ್ರದೇಶದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- ಪ್ರತಿಯೊಬ್ಬ ಅನಕ್ಷರಸ್ಥ ಮಹಿಳೆಯನ್ನು ಕಲಿಕೆಗೆ ಒಳಪಡಿಸಿ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದ ಅಂತರವನ್ನು ಇಳಿಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಶೋಷಿತ ವರ್ಗದ ಅನಕ್ಷರಸ್ಥರ ಕಲಿಕೆಗೆ ಒತ್ತು ನೀಡುವುದು.
- ಸಾಕ್ಷರತೆಯ ಮೂಲಕ ತಳಸ್ತರದ ಪ್ರಜಾತಂತ್ರ ಸಂಸ್ಥೆಗಳನ್ನು ಬಲಗೊಳಿಸುವುದು
- ಸಾಕ್ಷರತೆಯೊಂದಿಗೆ ವೃತ್ತಿ ಕೌಶಲ ಒದಗಿಸುವುದರ ಮೂಲಕ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಹೆಚ್ಚಳ.

**ಅನುಷ್ಠಾನ ಮಾರ್ಗೋಪಾಯ ಸಂಸ್ಥೆಗಳು:**

**ನಿರ್ವಹಣಾ ಸಮಿತಿಗಳು:**

- ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು ರಾಜ್ಯದ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದ ಪ್ರಧಾನ ಸಂಸ್ಥೆಯಾಗಿದೆ.

- ಕಾರ್ಯಕ್ರಮವನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಾದ ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದವರೆಗೆ ರಚಿಸಲಾದ ಲೋಕ ಶಿಕ್ಷಣ ಸಮಿತಿಗಳ ಮುಂದಾಳತ್ವದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ.
- ಜಿಲ್ಲಾ ಲೋಕ ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷರಾದ ಜಿಲ್ಲಾಧಿಕಾರಿಗಳು ಮತ್ತು ಉಪಾಧ್ಯಕ್ಷರಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಪರಿಣಾಮಕಾರಿ ಅನುಷ್ಠಾನ.

**ಸಹಯೋಗ ಮತ್ತು ಒಗ್ಗೂಡಿಸುವಿಕೆ:**

ಚುನಾಯಿತ ಪ್ರತಿನಿಧಿಗಳು, ಅಭಿವೃದ್ಧಿ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು, ರಾಜ್ಯ ಸಂಪನ್ಮೂಲ ಕೇಂದ್ರ, ಜನ ಶಿಕ್ಷಣ ಸಂಸ್ಥಾನಗಳ ಸಹಯೋಗ. ಸಾಕ್ಷರತಾ ಕಾರ್ಯಕ್ರಮವನ್ನು ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವುದು.

**ಲೋಕ ಶಿಕ್ಷಣ ಕೇಂದ್ರ:**

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ಲೋಕ ಶಿಕ್ಷಣ ಕೇಂದ್ರ ತೆರೆಯುವುದು. ಇದು ಸಾಕ್ಷರ ಭಾರತ್ ಕಾರ್ಯಕ್ರಮದ ಅಡಿಗಲ್ಲಾಗಿದ್ದು, ಇದು ಹತ್ತು ಹಲವು ಚಟುವಟಿಕೆಗಳಿಗೆ ವೇದಿಕೆಯಾಗಿದೆ. ಈ ಕೇಂದ್ರದ ನಿರ್ವಹಣೆಯನ್ನು ಪ್ರೇರಕರು ಮಾಡುವರು.

**ಕಾರ್ಯನಿರ್ವಾಹಕರು:**

- ರಾಜ್ಯ ಮಟ್ಟದಲ್ಲಿ 5, ಜಿಲ್ಲಾ ಮಟ್ಟದಲ್ಲಿ 72, ತಾಲ್ಲೂಕು ಮಟ್ಟದಲ್ಲಿ 107 ಸಂಯೋಜಕರು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ 6902 ಪ್ರೇರಕರು ಗೌರವಧನ ಆಧಾರದ ಸ್ವಯಂ ಸೇವಾ ನೆಲೆಯಲ್ಲಿ ಕಾರ್ಯನಿರ್ವಹಿಸುವರು.
- ಇವರಿಗೆ ಕಾರ್ಯದಕ್ಷತೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ 10 ದಿವಸಗಳ ಕಾರ್ಯನಿರ್ವಹಣಾ ತರಬೇತಿ ನೀಡಲಾಗುತ್ತದೆ.

**ಸಮೀಕ್ಷೆ:**

- ಗ್ರಾಮಗಳಲ್ಲಿ 15 + ಅನಕ್ಷರಸ್ಥರು, ಸ್ವಯಂ ಸೇವಕ ಬೋಧಕರು ಮತ್ತು ಕಲಿಕಾ ಕೇಂದ್ರ ನಡೆಸುವ ಸ್ಥಳ ಗುರುತಿಸಲು ಕುಟುಂಬ ಸಮೀಕ್ಷೆ ನಡೆಸುವುದು.
- ಒಬ್ಬ ಸ್ವಯಂ ಸೇವಕ 10 ಜನ ಕಲಿಕಾರ್ಥಿಗಳಿಗೆ ಕಲಿಸುವಂತೆ 36 ಲಕ್ಷ ಕಲಿಕಾರ್ಥಿಗಳ ಮತ್ತು 3.60 ಲಕ್ಷ ಸ್ವಯಂಸೇವಕರ ಹೊಂದಾಣಿಕೆ ಪಟ್ಟಿ ತಯಾರಿಸುವುದು.

**ತರಬೇತಿ:**

- 300 ಜನ ಸಂಪನ್ಮೂಲ ವ್ಯಕ್ತಿ ಮತ್ತು 7100 ಮುಖ್ಯ ತರಬೇತುದಾರರಿಗೆ 10 ದಿವಸಗಳ ಕಾರ್ಯಕ್ರಮ ಪರಿಚಯ ಮತ್ತು ಪಠ್ಯಾಧಾರಿತ ತರಬೇತಿ.

- ಕಲಿಕಾರ್ಥಿಗಳು ಕೇಂದ್ರಗಳಿಗೆ ಆಸಕ್ತಿಯಿಂದ ಬರುವಂತೆ ಪರಿಣಾಮಕಾರಿಯಾಗಿ ಬೋಧಿಸುವ ಬೋಧನಾ ತರಬೇತಿಯನ್ನು 3.60 ಲಕ್ಷ ಜನ ಸ್ವಯಂ ಸೇವಕ ಬೋಧಕರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡುವುದು.

**ಕಲಿಕಾ ಕೇಂದ್ರ:**

- 10 ಜನ ಕಲಿಕಾರ್ಥಿಗಳ ಕಲಿಕೆಗೆ ಕಲಿಕಾ ಕೇಂದ್ರ.
- ಕೇಂದ್ರದಲ್ಲಿ ಕಲಿಕಾ ಬೋಧನಾ ಸಾಮಗ್ರಿಗಳ ವ್ಯವಸ್ಥೆ
- ಅನಕ್ಷರಸ್ಥರಿಗೆ ಓದು ಬರಹ ಕಲಿಸಿ ಅರಿವು ಮೂಡಿಸಲಾಗುತ್ತದೆ. ಕಲಿತ ಅಕ್ಷರ ಜ್ಞಾನವನ್ನು ಅವರ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳುವುದಾಗಿದೆ.

**ಕಲಿಕಾ ಅವಧಿ:**

- ಕಲಿಕಾರ್ಥಿ ಮತ್ತು ಸ್ವಯಂ ಸೇವಕ ಬೋಧಕರ ಬಿಡುವಿನ ವೇಳೆಯ 1 1/2 ಗಂಟೆ ಸಂಜೆ/ರಾತ್ರಿ ಕಲಿಕಾ ಬೋಧನಾ ಪ್ರಕ್ರಿಯೆ.
- 6 ತಿಂಗಳ ಅವಧಿಯ 200 ಗಂಟೆಗಳಲ್ಲಿ ಪ್ರಾಥಮಿಕೆ ಮೂಲಕ ಓದುಬರಹ ಲೆಕ್ಕಾಚಾರ
- 4 ತಿಂಗಳ ಅವಧಿಯ 100 ಗಂಟೆಗಳಲ್ಲಿ ಸೇತು ಬಂಧ ಪ್ರಾಥಮಿಕೆಯ ಮೂಲಕ ಕಲಿಕೆ ಸ್ಥಿರೀಕರಣ.

**ಕಲಿಕಾ ವಾತಾವರಣ ನಿರ್ಮಾಣ:**

ಸಾಕ್ಷರತಾ ಕಾರ್ಯಕ್ರಮದ ಮುಖ್ಯ ಗುರಿ ಕಲಿಕಾ ಕೇಂದ್ರದಲ್ಲಿ ಅನಕ್ಷರಸ್ಥರು ಕಲಿಯುವ ಮತ್ತು ಸ್ವಯಂ ಸೇವಕರು ಬೋಧಿಸುವ ನಿರಂತರ ಪ್ರಕ್ರಿಯೆ ನಡೆದು ಸಾಕ್ಷರಸ್ಥರನ್ನಾಗಿಸುವುದು. ಇದಕ್ಕೆ ಪೂರಕ ಕಲಿಕಾ ವಾತಾವರಣ ನಿರ್ಮಾಣಕ್ಕಾಗಿ ಮತ ಮಾನ್ಯಗಳು, ಮಸೀದಿ, ಚರ್ಚುಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮಿಗಳು, ವಿದ್ಯಾವಂತರು, ಸಾಹಿತಿಗಳು, ಕಲಾವಿದರು ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿದೆ.

- ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳ ಸಭೆ ನಡೆಸಿ ಕಾರ್ಯಕ್ರಮದ ವಿಷಯ ಪರಿಚಯ ಮಾಡಿಸುವುದು.
- ಸರ್ಕಾರದ ಅಭಿವೃದ್ಧಿ ಯೋಜನೆ ಅನುಷ್ಠಾನದಲ್ಲಿ ಪಾಲ್ಗೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು, ಕಲಿಕಾ ಕೇಂದ್ರಗಳಿಗೆ ಭೇಟಿ ನೀಡಿ ಪ್ರೇರೇಪಿಸುವುದು.

**ಕಲಿಕಾ ಸಾಮರ್ಥ್ಯ:**

- ಕಲಿಕಾರ್ಥಿಗಳ ಕಲಿಕಾ ಸಾಮರ್ಥ್ಯ ಅಳೆಯಲು, ಮಾಸಿಕ ಪರೀಕ್ಷೆ ಹಾಗೂ ಅಂತಿಮ ಮೌಲ್ಯಮಾಪನ

**ಪರಿವೀಕ್ಷಣೆ:**

- ಸಮೀಕ್ಷೆ ತರಬೇತಿ, ಮೌಲ್ಯಮಾಪನ ಮತ್ತು ಅನುಷ್ಠಾನಕ್ಕಾಗಿ ಮೇಲ್ಮಟ್ಟದಿಂದ ತಳಸ್ತರದವರೆಗೆ ಪರಿವೀಕ್ಷಣೆ.

- ಪರಿಹಾರೋಪಾಯಗಳನ್ನು ಕಂಡುಕೊಂಡು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

**ಅನುದಾನ:**

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ಶೇ.75:25 ರ ಅನುಪಾತ
- ಪ್ರತಿಯೊಬ್ಬ ಕಲಿಕಾರ್ಥಿಯ ಮೂಲ ಸಾಕ್ಷರತೆಯ ಕಲಿಕೆಗೆ ರೂ.230/-
- ಸಮೀಕ್ಷೆ, ತರಬೇತಿ, ಕಲಿಕಾ ಬೋಧನಾ ಸಾಮಗ್ರಿ, ವಾತಾವರಣ ನಿರ್ಮಾಣ, ಪರಿವೀಕ್ಷಣೆ ಮತ್ತು ಆಡಳಿತ ವೆಚ್ಚಗಳನ್ನೊಳಗೊಂಡಿರುತ್ತದೆ.

********

**(ಪೋಸ್ಟರ್-2)**

## ಸಾಕ್ಷರ ಭಾರತ್ – ಸಾಕ್ಷರ ಕರ್ನಾಟಕ

**'ಸಾಕ್ಷರ ಭಾರತ್'** ಜನಸಮುದಾಯದ ಕಾರ್ಯಕ್ರಮವಾಗಿದ್ದು, ಕರ್ನಾಟಕದ 18 ಜಿಲ್ಲೆ, 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 15 ವರ್ಷಕ್ಕಿಂತ ಹೆಚ್ಚಿನ ವಯೋಮಾನದ 36 ಲಕ್ಷ ಗ್ರಾಮೀಣ ಪ್ರದೇಶದ ಅನಕ್ಷರಸ್ಥರಿಗೆ ವಿಶೇಷವಾಗಿ ಮಹಿಳೆ ಮತ್ತು ಶೋಷಿತ ವರ್ಗದವರಿಗೆ ಓದು-ಬರಹ ಕಲಿಸಿ ಕಲಿಕಾ ಸಮಾಜದ ನಿರ್ಮಾಣವಾಗಬೇಕಾಗಿದೆ.

ಕರ್ನಾಟಕವನ್ನು ಸಾಕ್ಷರ ನಾಡು ಸಮೃದ್ಧಿಯ ಬೀಡಾಗಿ ಕಂಗೊಳಿಸಲು ಸರ್ವರ ಸಮರ್ಪಣಾ ಭಾವದ ಕೊಡುಗೆಯನ್ನು ಆಶಿಸಿದೆ.

- ಗ್ರಾಮವನ್ನು ಸಾಕ್ಷರಸ್ಥ ಗ್ರಾಮವನ್ನಾಗಿಸಲು ಗ್ರಾಮ ಪಂಚಾಯಿತಿ ಸದಸ್ಯರು ಜವಾಬ್ದಾರಿ ಹೊರುವುದು.
- 10 ಜನ ಕಲಿಕಾರ್ಥಿಗಳ ಕಲಿಕೆಗೆ ಕಲಿಕಾ ಕೇಂದ್ರ ನಡೆಸಲು ಮನೆಯಲ್ಲಿ ಅವಕಾಶ ನೀಡುವುದು.
- ವಿದ್ಯಾವಂತರು 10 ಜನ ಕಲಿಕಾರ್ಥಿಗಳಿಗೆ ಓದು ಬರಹ ಕಲಿಸಲು ಸ್ವಯಂಸೇವಕ ಬೋಧಕರಾಗುವುದು
- ಅನಕ್ಷರಸ್ಥರು ಕಲಿಕಾ ಕೇಂದ್ರಕ್ಕೆ ದಾಖಲಾಗಿ ಹಾಜರಾಗುವಂತೆ ಪ್ರೇರೇಪಿಸುವುದು.
- ಮಹಿಳಾ ಸಂಘಟನೆಗಳು, ಮಂಡಳಿಗಳು ಮಹಿಳೆಯರ ಸಾಕ್ಷರತೆಯ ಜವಾಬ್ದಾರಿ ವಹಿಸಿಕೊಳ್ಳುವುದು.
- ಸ್ತ್ರೀಶಕ್ತಿ ಗುಂಪು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸಮಖ್ಯ ಕಲಿಕಾ ಕೇಂದ್ರದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
- ರೈತ ಸಂಘಟನೆಗಳು, ರೈತ ಸಮುದಾಯದ ಸಾಕ್ಷರತೆ ಹೆಚ್ಚಿಸಲು ಶ್ರಮಿಸುವುದು.

- ಶಿಕ್ಷಕರು  ವಿದ್ಯಾರ್ಥಿಗಳ ಅನಕ್ಷರಸ್ಥ ಪಾಲಕರು ಕಲಿಕಾ ಕೇಂದ್ರದಲ್ಲಿ ಕಲಿಯುವಂತೆ ಪ್ರೇರೇಪಿಸುವುದು ಹಾಗೂ ಗ್ರಾಮದ ಕಲಿಕಾ ಕೇಂದ್ರಗಳ ಉಸ್ತುವಾರಿ ಮಾಡುವುದು.
- ಶಾಲಾ ಮುಖ್ಯೋಪಾಧ್ಯಾಯರು ಕಲಿಕಾ ಕೇಂದ್ರ ನಡೆಸಲು  ಅವಕಾಶ  ನೀಡುವುದು.
- ಭಜನಾ ಮಂಡಳಿ, ಕಲಾವಿದರು, ಕಥೆಗಾರರು ಕೇಂದ್ರಕ್ಕೆ ಭೇಟಿ ನೀಡಿ ಕಲೆಯ ಮೂಲಕ ಕಲಿಕಾರ್ಥಿಗಳನ್ನು ಮನರಂಜಿಸಿ ಕಲಿಕೆಗೆ ಪ್ರೇರೇಪಿಸುವುದು.
- ಜನ ಪರ ಕಾಳಜಿ ಉಳ್ಳವರು, ಸ್ವಯಂ ಸೇವಕರು ಮತ್ತು ಕಲಿಕಾರ್ಥಿಗಳಿಗೆ ಉತ್ತೇಜಿಸುವುದು.
- ಕಲಿಕಾ ಕೇಂದ್ರದಲ್ಲಿ ಪ್ರತಿ ದಿನ ಕಲಿಸುವ ಸ್ವಯಂ ಸೇವಕ ಬೋಧಕರಿಗೆ ದಾನಿಗಳು ಪ್ರೋತ್ಸಾಹಿಸುವುದು
- ಒಂದು ಕಲಿಕಾ ಕೇಂದ್ರ, ಒಂದು ಗ್ರಾಮ ಅಥವಾ ಒಂದು ಗ್ರಾಮ ಪಂಚಾಯಿತಿಯನ್ನು ಸಾಕ್ಷರಗೊಳಿಸಲು ಸಂಘ ಸಂಸ್ಥೆಗಳು, ಉದ್ಯಮಿಗಳು ದತ್ತು ತೆಗೆದುಕೊಳ್ಳುವುದು.

**(ಪೋಸ್ಟರ್–3)**

## ಸಾಕ್ಷರ ಭಾರತ್ – ಸಾಕ್ಷರ ಕರ್ನಾಟಕ

ನದಿ, ಕೊಳ, ಬೆಟ್ಟ–ಗುಡ್ಡ, ಅರಣ್ಯ–ಖನಿಜಗಳಿಂದ ತುಂಬಿದ ನಾಡು, ಕರ್ನಾಟಕ.  ಕನ್ನಡ ನಾಡು–ಸಾಕ್ಷರ ನಾಡು ಸಮೃಧ್ಧಿಯ ಬೀಡಾಗಲು ಜನ ಸಾಕ್ಷರತೆ ಪಡೆದು ಸಂಪನ್ಮೂಲರಾಗಬೇಕು. ನಾಡಿನ ಸಂಪತ್ತನ್ನು ಉಳಿಸಿ, ಬೆಳೆಸುವ ಹರಿಕಾರರಾಗಬೇಕು. ಈ ದಿಸೆಯಲ್ಲಿ ಸಮಗ್ರ  ಅಭಿವೃದ್ಧಿ ಸಾಧಿಸಲು ಮಹತ್ವಾಕಾಂಕ್ಷಿ **'ಸಾಕ್ಷರ ಭಾರತ್'**  ಕಾರ್ಯಕ್ರಮದಲ್ಲಿ ನಾವೆಲ್ಲ ಲಿಂಗಭೇದವಿಲ್ಲದೆ ಜಾತ್ಯಾತೀತ, ವರ್ಗಾತೀತ, ಪಕ್ಷಾತೀತರಾಗಿ ಪಾಲ್ಗೊಂಡು ಸಾಕ್ಷರ ಆಂದೋಲನ ಮಾಡೋಣ, **"ಕನ್ನಡ ನಾಡು ಸಾಕ್ಷರ ನಾಡು"** ಕಟ್ಟೋಣ.

- ಗ್ರಾಮೀಣ ಪ್ರದೇಶದ 41% ರಷ್ಟು ಜನ ಅನಕ್ಷರಸ್ಥರು
- ಗ್ರಾಮೀಣ ಪ್ರದೇಶದ ಪ್ರತಿ 2 ನೇ ಮಹಿಳೆ ಅನಕ್ಷರಸ್ಥಳು.
- 60% ರಷ್ಟು ಪರಿಶಿಷ್ಠ ಜಾತಿಯ ಮಹಿಳೆಯರು ಅನಕ್ಷರಸ್ಥರು
- 64% ರಷ್ಟು ಪರಿಶಿಷ್ಠ ಪಂಗಡದ ಮಹಿಳೆಯರು ಅನಕ್ಷರಸ್ಥರು

ಕರ್ನಾಟಕದ 18 ಜಿಲ್ಲೆ, 107 ತಾಲ್ಲೂಕು, 3451 ಗ್ರಾಮ ಪಂಚಾಯಿತಿಗಳಲ್ಲಿ 15 ವರ್ಷಕ್ಕಿಂತ ಹೆಚ್ಚಿನ ವಯೋಮಾನದ 36 ಲಕ್ಷ ಅನಕ್ಷರಸ್ಥರ ಕಲಿಕೆಗೆ ಕಾರ್ಯಕ್ರಮದಲ್ಲಿ ಈ ಕೆಳಗಿನಂತೆ ಆದ್ಯತೆ ನೀಡಲಾಗಿದೆ.

- ನಗರ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂತರವನ್ನು ಅಳಿಸಲು ಗ್ರಾಮೀಣ ಪ್ರದೇಶದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- ಪ್ರತಿಯೊಬ್ಬ ಅನಕ್ಷರಸ್ಥ ಮಹಿಳೆಯನ್ನು ಕಲಿಕೆಗೆ ಒಳಪಡಿಸಿ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದ ಅಂತರವನ್ನು ಇಳಿಸುವುದು.

- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ  ಮತ್ತು ಶೋಷಿತ ವರ್ಗದ ಅನಕ್ಷರಸ್ಥರ ಕಲಿಕೆಗೆ ಒತ್ತು ನೀಡುವುದು.
- ಸಾಕ್ಷರತೆಯ ಮೂಲಕ ತಳಸ್ತರದ ಪ್ರಜಾತಂತ್ರ ಸಂಸ್ಥೆಗಳನ್ನು ಬಲಗೊಳಿಸುವುದು
- ಸಾಕ್ಷರತೆಯೊಂದಿಗೆ ವೃತ್ತಿ ಕೌಶಲ ಒದಗಿಸುವುದರ ಮೂಲಕ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಹೆಚ್ಚಳ.

ಬನ್ನಿ ಬಾಂಧವರೇ, **ಸಾಕ್ಷರ ಭಾರತ್–ಸಾಕ್ಷರ ಕರ್ನಾಟಕ** ಮಹತ್ವಾಕಾಂಕ್ಷಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ. ಕಲಿತ ಋಣವನ್ನು ಕಲಿಸಿ ತೀರಿಸೋಣ.

************

## ಟಿ.ವಿ. ಸ್ಕ್ರೋಲ್

**ಸಾಕ್ಷರ ಭಾರತ್ ಆಂದೋಲನದಲ್ಲಿ ಪಾಲ್ಗೊಳ್ಳೋಣ, 15 ವರ್ಷ ಮೇಲ್ಪಟ್ಟ ಅನಕ್ಷರಸ್ಥರಿಗೆ ಓದು ಬರಹ ಕಲಿಸೋಣ, ಕನ್ನಡ ನಾಡು ಸಾಕ್ಷರ ನಾಡು ಕಟ್ಟೋಣ. ಇದು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಲೋಕ ಶಿಕ್ಷಣ ನಿರ್ದೇಶನಾಲಯದ ಪ್ರಚಾರ.**

## ರೇಡಿಯೋ ಜಿಂಗಲ್

ಬನ್ನಿ ಬಾಂಧವರೆ, ಸಾಕ್ಷರ ಭಾರತ್ ಜನಾಂದೋಲನದಲ್ಲಿ ಪಾಲ್ಗೊಳ್ಳೋಣ, ಅಕ್ಷರ ಕಲಿಯೋಣ, ಅಕ್ಷರ ಕಲಿಸೋಣ,
ಅನಕ್ಷರತೆ ಅಳಿಸೋಣ, ಸಾಕ್ಷರತೆ ಹೊಂದೋಣ,
ಕನ್ನಡನಾಡು ಸಾಕ್ಷರ ನಾಡು ಬೆಳಗೋಣ.
ಇದು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ,
ಲೋಕ ಶಿಕ್ಷಣ ನಿರ್ದೇಶನಾಲಯದ ಪ್ರಚಾರ.

## ಸಾಕ್ಷರತಾ ಪ್ರಮಾಣ ವಚನ

'ಸಾಕ್ಷರ ಭಾರತ್', ಕರ್ನಾಟಕವನ್ನು ಸಾಕ್ಷರ ಸಮೃದ್ಧ ನಾಡನ್ನಾಗಿಸುವ ಮಹತ್ವಾಕಾಂಕ್ಷಿ ಕಾರ್ಯಕ್ರಮ ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದೇನೆ.

ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರ ಮನೆ ಹಾಗೂ ಮನವನ್ನು ತಲುಪಿ, ಮಹಿಳೆ ಮತ್ತು ಶಿಕ್ಷಣ ವಂಚಿತ ವರ್ಗದವರ ಕಲಿಕೆಗಾಗಿ ಈ ಕಾರ್ಯಕ್ರಮವು ಜನಾಂದೋಲನಗೊಳ್ಳಲು ಕಾಯಾ, ವಾಚಾ, ಮನಸಾ ಪಾಲ್ಗೊಂಡು ಸೇವೆ ಸಲ್ಲಿಸುವ ಸಂಕಲ್ಪ ಮಾಡಿಕೊಂಡಿದ್ದೇನೆ.

ಅನಕ್ಷರಸ್ಥರೆಲ್ಲರೂ ಅಕ್ಷರ ಕಲಿತು ಸಾಕ್ಷರಸ್ಥರಾಗಿ ಕೌಶಲಾಭಿವೃದ್ಧಿ ಹೊಂದಲು ಹಾಗೂ ಕಲಿಯುತ್ತಿರುವ ಸಮಾಜದ ನಿರ್ಮಾಣಕ್ಕಾಗಿ ನಾನು ಕಲಿತ ಋಣವನ್ನು ಕಲಿಸಿ ತೀರಿಸುತ್ತೇನೆಂದು ಪ್ರಮಾಣೀಕರಿಸುತ್ತೇನೆ.

| 2001ರ ಜನಗಣತಿ ಪ್ರಕಾರ ಸಾಕ್ಷರ ಭಾರತ್ ಜಿಲ್ಲೆಗಳ ಮಹಿಳಾ ಸಾಕ್ಷರತಾ ಪ್ರಮಾಣ | | | |
|---|---|---|---|
| ಕ್ರಸಂ | ಜಿಲ್ಲೆ | ಮಹಿಳಾ ಸಾಕ್ಷರತಾ ಪ್ರಮಾಣ | ಅನಕ್ಷರಸ್ಥರ ಪ್ರಮಾಣ (ರ್‍ಯಾಂಕಿಂಗ್) |
| 1 | ರಾಯಚೂರು | 27.75 | 1 |
| 2 | ಕೊಪ್ಪಳ | 35.17 | 3 |
| 3 | ಚಾಮರಾಜನಗರ | 33.21 | 4 |
| 4 | ಬಿಜಾಪುರ | 33.62 | 5 |
| 5 | ಬಾಗಲಕೋಟೆ | 33.73 | 6 |
| 6 | ಬಳ್ಳಾರಿ | 37.09 | 7 |
| 7 | ಬೀದರ್ | 37.67 | 8 |
| 8 | ಮಂಡ್ಯ | 42.45 | 9 |
| 9 | ಕೋಲಾರ/ ಚಿಕ್ಕಬಳ್ಳಾಪುರ | 43.01 | 10 |
| 10 | ಗದಗ | 43.39 | 11 |
| 11 | ಬೆಳಗಾವಿ | 43.72 | 12 |
| 12 | ಚಿತ್ರದುರ್ಗ | 45.08 | 13 |
| 13 | ಬೆಂಗಳೂರು ಗ್ರಾ/ ರಾಮನಗರ | 46.04 | 14 |
| 14 | ಮೈಸೂರು | 48.16 | 15 |
| 15 | ತುಮಕೂರು | 48.85 | 16 |
| 16 | ಹಾವೇರಿ | 48.96 | 17 |

**(ಪೋಸ್ಟರ್–1)**

**ಸಾಕ್ಷರ ಭಾರತ್ ಕಾರ್ಯಕ್ರಮದ ಪ್ರಮುಖಾಂಶಗಳು:**

- ಶೇ. 50 ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಇರುವ ರಾಜ್ಯದ 18 ಜಿಲ್ಲೆಗಳ, 107 ತಾಲ್ಲೂಕು ಮತ್ತು 3451 ಗ್ರಾಮಪಂಚಾಯತ್‌ಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ ಉಪಗ್ರಾಮಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ.
- ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ 3451 ಲೋಕ ಶಿಕ್ಷಣ ಕೇಂದ್ರಗಳನ್ನು ತೆರೆಯುವುದು. ಪ್ರತಿ ಕೇಂದ್ರದ ನಿರ್ವಹಣೆಗೆ ಇಬ್ಬರಂತೆ 6902 ಪ್ರೇರಕರು.
- ಗ್ರಾಮೀಣ ಭಾಗದ ಮಹಿಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಶೋಷಿತ ವರ್ಗದ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರು ಮೂಲ ಸಾಕ್ಷರತೆ ಪಡೆಯಲು ಅವಕಾಶ.
- ವಿದ್ಯಾವಂತರು ಸ್ವಯಂ ಸೇವಕ ಬೋಧಕರಾಗಿ ಒಬ್ಬರು 10 ಜನ ಅನಕ್ಷರಸ್ಥರಿಗೆ ಕಲಿಸುವುದಾಗಿದೆ
- ಅಭಿವೃದ್ಧಿ ಇಲಾಖೆಗಳ ಯೋಜನೆಗಳೊಂದಿಗೆ ಸಾಕ್ಷರ ಭಾರತ್ ಕಾರ್ಯಕ್ರಮವನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸುವುದು.
- 'ಮನೆಯೇ ಮೊದಲ ಪಾಠಶಾಲೆ-ಜನನಿ ತಾ ಮೊದಲ ಗುರು' ಅಕ್ಷರ ಕಲಿತ ಮಹಿಳೆ ಮನೆಯಲ್ಲಿ ಮಕ್ಕಳಿಗೆ ಅಕ್ಷರ ಕಲಿಸಿ ಶಾಲೆಗೆ ಕಳುಹಿಸುವಳು.
- ಸಾಕ್ಷರತೆ ಅಭಿವೃದ್ಧಿಗೆ ಪೂರಕ. ಸಾಕ್ಷರತಾ ಪ್ರಮಾಣ ಹೆಚ್ಚಿರುವ ಸಮಾಜ, ಪ್ರದೇಶ, ದೇಶಗಳು ಅಭಿವೃದ್ಧಿ ಹೊಂದಿವೆ.

**ಬನ್ನಿ ಬಾಂಧವರೇ, ಕರ್ನಾಟಕವನ್ನು ಸಾಕ್ಷರ ನಾಡು ಸಮೃದ್ಧಿಯ ಬೀಡನ್ನಾಗಿಸುವ ಸಾಕ್ಷರ ಭಾರತ ಕಾರ್ಯಕ್ರಮದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳೋಣ.**

**(ಪ್ಯಾನಲ್-1)**

**ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.**

## ಲೋಕ ಶಿಕ್ಷಣ ನಿರ್ದೇಶನಾಲಯದ ಕಾರ್ಯಕ್ರಮಗಳು

### 1. ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ

ಪ್ರೌಢಶಾಲೆಯ 8 ಮತ್ತು 9ನೇ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಯು ಮನೆ ಅಥವಾ ನೆರೆಹೊರೆಯಲ್ಲಿ ಇಬ್ಬರು ಅನಕ್ಷರಸ್ಥರಿಗೆ ಕಲಿಸುವುದರ ಮೂಲಕ 5.94 ಲಕ್ಷ ಅನಕ್ಷರಸ್ಥರು ಕಲಿಯಲು ಅವಕಾಶವಾಗಿದೆ.

**2. ವಿಶೇಷ ಘಟಕ/ಗಿರಿಜನ ಉಪಯೋಜನೆಯಡಿ ಶಿಬಿರ ಸಾಕ್ಷರತೆ**

ಸಾಕ್ಷರತಾ ಶಿಬಿರಗಳ ಮೂಲಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 0.67 ಲಕ್ಷ ಅನಕ್ಷರಸ್ಥರಿಗಾಗಿ ಶೀಘ್ರ ಕಲಿಕೆ ಕಾರ್ಯಕ್ರಮ ನಡೆಸಲಾಗಿದೆ.

**3. ವಿಶೇಷ ಘಟಕ/ಗಿರಿಜನ ಉಪಯೋಜನೆಯಡಿ ವೃತ್ತಿ ಕೌಶಲ ತರಬೇತಿ**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 0.14 ಲಕ್ಷ ನವಸಾಕ್ಷರರ ಜೀವನ ಗುಣಮಟ್ಟ ಸುಧಾರಣೆಗಾಗಿ ವೃತ್ತಿ ಕೌಶಲ ತರಬೇತಿ ನೀಡಲಾಗಿದೆ.

**4. ಬಾಕಿ ಉಳಿದ ಅನಕ್ಷರಸ್ಥರಿಗಾಗಿ ಸಾಕ್ಷರತೆ**

ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಕಲಿಕೆಗೆ ದಾಖಲಾಗದೇ ಉಳಿದ 16.14 ಲಕ್ಷ ಅನಕ್ಷರಸ್ಥರಿಗಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

**5. ಮುಂದುವರಿಕೆ ಶಿಕ್ಷಣ**

ಜೀವನ ಪರ್ಯಂತರ ಕಲಿಕೆಗಾಗಿ ಇರುವ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದಲ್ಲಿ 1.91 ಲಕ್ಷ ಜನರು ಓದು–ಬರಹ, ವಾಚನಾಲಯ, ಗ್ರಂಥಾಲಯ, ಆಟೋಟ, ಸಾಂಸ್ಕೃತಿಕ ಚಟುವಟಿಕೆಗಳ ಪ್ರಯೋಜನ ಪಡೆದಿರುವರು.

**ಕನ್ನಡ ನಾಡು – ಸಾಕ್ಷರ ನಾಡು**

**"ಎಲ್ಲಾದರು ಇರು, ಎಂತಾದರು ಇರು, ಓದು ಬರಹವ ಕಲಿತವನಾಗಿರು"**

**(ಪ್ಯಾನಲ್–2)**

## ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ

## ಸಾಕ್ಷರ ಭಾರತ್ – 2012

## ಸಾಕ್ಷರ ಕರ್ನಾಟಕ

- **'ಸಾಕ್ಷರ ಭಾರತ್'** – ಮಹತ್ವಾಕಾಂಕ್ಷಿ ಸಮಗ್ರ ಕಾರ್ಯಕ್ರಮ. ಗ್ರಾಮೀಣ ಭಾಗದ ಮಹಿಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಶೋಷಿತ ವರ್ಗದ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರು ಮೂಲ ಸಾಕ್ಷರತೆ ಪಡೆಯಲು ಅವಕಾಶ ಇದೆ.

- ಶೇ. 50 ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಇರುವ ರಾಜ್ಯದ 18 ಜಿಲ್ಲೆಗಳ, 107 ತಾಲ್ಲೂಕು ಮತ್ತು 3451 ಗ್ರಾಮಪಂಚಾಯತ್‌ಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ ಉಪಗ್ರಾಮಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ.

**ಕಾರ್ಯಕ್ರಮದ ಉದ್ದೇಶ:**

- ಅನಕ್ಷರಸ್ಥರ ಕಲಿಕೆಗೆ ಕ್ರಿಯಾತ್ಮಕ ಸಾಕ್ಷರತೆ.
- ಓದು ಮುಂದುವರೆಸಲು ಬಯಸುವವರಿಗೆ ಸಮಾನ ಶಿಕ್ಷಣ
- ಜೀವನ ಗುಣಮಟ್ಟ ಸುಧಾರಣೆಗೆ ವೃತ್ತಿ ಕೌಶಲ
- ಜೀವನ ಪರ್ಯಂತರ ಕಲಿಕೆಗೆ ಮುಂದುವರಿಕೆ ಶಿಕ್ಷಣ

**ಅನುಷ್ಠಾನ ಮಾರ್ಗೋಪಾಯ ಸಂಸ್ಥೆಗಳು:**

**ನಿರ್ವಹಣಾ ಸಮಿತಿಗಳು:**

- ಕಾರ್ಯಕ್ರಮವನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದವರೆಗೆ ಸಾಂಸ್ಥಿಕ ಚೌಕಟ್ಟನ್ನು ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನೊಳಗೊಂಡು ರಚಿಸಲಾಗಿವೆ.
- ಚುನಾಯಿತ ಪ್ರತಿನಿಧಿಗಳು, ಆಡಳಿತಾಧಿಕಾರಿಗಳು, ಮಠ ಮಾನ್ಯಗಳು, ಮಸೀದಿ, ಚರ್ಚುಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮಿಗಳು, ವಿದ್ಯಾವಂತರು, ಸಾಹಿತಿಗಳು, ಕಲಾವಿದರು ಮುಂತಾದವರು ಪಾಲ್ಗೊಂಡು ಸಹಯೋಗ ನೀಡುವುದಾಗಿದೆ.
- ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ಲೋಕ ಶಿಕ್ಷಣ ಕೇಂದ್ರ ತೆರೆಯುವುದು. ಇದು ಸಾಕ್ಷರ ಭಾರತ್ ಕಾರ್ಯಕ್ರಮದ ಅಡಿಗಲ್ಲಾಗಿದ್ದು, ಇದು ಹತ್ತು ಹಲವು ಚಟುವಟಿಕೆಗಳಿಗೆ ವೇದಿಕೆಯಾಗಿದೆ. ಈ ಕೇಂದ್ರದ ನಿರ್ವಹಣೆಯನ್ನು ಪ್ರೇರಕರು ಮಾಡುವರು.
- ರಾಜ್ಯ ಮಟ್ಟದಲ್ಲಿ 5, ಜಿಲ್ಲಾ ಮಟ್ಟದಲ್ಲಿ 72, ತಾಲ್ಲೂಕು ಮಟ್ಟದಲ್ಲಿ 107 ಸಂಯೋಜಕರು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ 6902 ಗೌರವಧನ ಆಧಾರದ ಸ್ವಯಂ ಸೇವಾ ನೆಲೆಯಲ್ಲಿ ಪ್ರೇರಕರು ಕಾರ್ಯನಿರ್ವಹಿಸುವರು.
- ಇವರಿಗೆ ಕಾರ್ಯದಕ್ಷತೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ 10 ದಿವಸಗಳ ಕಾರ್ಯನಿರ್ವಹಣಾ ತರಬೇತಿ ನೀಡಲಾಗುತ್ತದೆ.
- ಗ್ರಾಮಗಳಲ್ಲಿ 15 + ವಯೋಮಾನದ 36 ಲಕ್ಷ ಅನಕ್ಷರಸ್ಥರು, 3.6 ಲಕ್ಷ ಸ್ವಯಂ ಸೇವಕ ಬೋಧಕರನ್ನು ಗುರುತಿಸಲು ಕುಟುಂಬ ಸಮೀಕ್ಷೆ.
- 300 ಜನ ಸಂಪನ್ಮೂಲ ವ್ಯಕ್ತಿ ಮತ್ತು 7100 ಮುಖ್ಯ ತರಬೇತುದಾರರಿಗೆ 10 ದಿವಸಗಳ ಕಾರ್ಯಕ್ರಮ ಅನುಷ್ಠಾನ ಮತ್ತು ಪಠ್ಯಾಧಾರಿತ ತರಬೇತಿ.
- 3.60 ಲಕ್ಷ ಜನ ಸ್ವಯಂ ಸೇವಕ ಬೋಧಕರಿಗೆ 10 ದಿವಸಗಳ ಪಠ್ಯಾಧಾರಿತ ತರಬೇತಿ.
- ವಿದ್ಯಾವಂತರು ಸ್ವಯಂ ಸೇವಕ ಬೋಧಕರಾಗಿ ಒಬ್ಬರು 10 ಜನ ಅನಕ್ಷರಸ್ಥರಿಗೆ ಕಲಿಸುವುದಾಗಿದೆ

- ಕಲಿಕಾರ್ಥಿ ಮತ್ತು ಸ್ವಯಂ ಸೇವಕ ಬೋಧಕರ ಬಿಡುವಿನ ವೇಳೆಯ 200 ಗಂಟೆಗಳಲ್ಲಿ ದಿನದ ಒಂದು ಅಥವಾ ಒಂದೂವರೆ ಗಂಟೆ ಕಲಿಕಾ ಬೋಧನಾ ಪ್ರಕ್ರಿಯೆ ನಡೆಸುವುದು.
- ಕಲಿಕಾರ್ಥಿಗಳ ಕಲಿಕಾ ಸಾಮರ್ಥ್ಯ ಅಳೆಯಲು, ಮಾಸಿಕ ಪರೀಕ್ಷೆ ಹಾಗೂ ಅಂತಿಮ ಮೌಲ್ಯಮಾಪನ
- ಸಮೀಕ್ಷೆ ತರಬೇತಿ, ಮೌಲ್ಯಮಾಪನ ಮತ್ತು ಅನುಷ್ಠಾನಕ್ಕಾಗಿ ಮೇಲ್ಮಟ್ಟದಿಂದ ತಳಸ್ತರದವರೆಗೆ ಮೇಲ್ವಿಚಾರಣೆ.
- ಪರಿಹಾರೋಪಾಯಗಳನ್ನು ಕಂಡುಕೊಂಡು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
- ಮಂಜೂರಾಗಿರುವ ಅನುದಾನ ರೂ. 161.00 ಕೋಟಿ.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ಶೇ.75:25 ರ ಅನುಪಾತ
- ಪ್ರತಿಯೊಬ್ಬ ಕಲಿಕಾರ್ಥಿಯ ಮೂಲ ಸಾಕ್ಷರತೆಯ ಕಲಿಕೆಗೆ ರೂ.230/–
- ಸಮೀಕ್ಷೆ, ತರಬೇತಿ, ಕಲಿಕಾ ಬೋಧನಾ ಸಾಮಗ್ರಿ, ವಾತಾವರಣ ನಿರ್ಮಾಣ, ಪರಿವೀಕ್ಷಣೆ ಮತ್ತು ಆಡಳಿತ ವೆಚ್ಚಗಳನ್ನೊಳಗೊಂಡಿರುತ್ತದೆ.

**ಕನ್ನಡ ನಾಡು – ಸಾಕ್ಷರ ನಾಡು**

**'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ, ಇಂದಲ್ಲ ನಾಳೆ ಫಲ ಕೊಡುವುದು'**

**ಸ್ಥಳೀಯ ಸಂಪನ್ಮೂಲಗಳು:**

**ಆತ್ಮೀಯ ಸ್ವಯಂ ಸೇವಕ ಬೋಧಕರೇ,**

ನಿಮ್ಮ ಕಲಿಕಾ ಕೇಂದ್ರ ಆಕರ್ಷಣೀಯವಾಗಿರಲು ಸ್ಥಳೀಯ ಸಂಪನ್ಮೂಲಗಳ ಬಳಕೆ ಮಾಡಿಕೊಳ್ಳಿ. ಪಾಠದ ವಿಷಯಕ್ಕನುಗುಣವಾಗಿ ಎಲೆ, ಕಡ್ಡಿ, ಬಳೆ, ಗೋಲಿ, ಕಲ್ಲು, ಹುಣಸೇ ಬೀಜ, ಧಾನ್ಯ, ರಂಗೋಲಿ ಪುಡಿ ಇತ್ಯಾದಿಗಳನ್ನು ಬಳಕೆ ಮಾಡಿಕೊಂಡು ಕಲಿಸಿರಿ.

ಹಳೇ ಪತ್ರಿಕೆ, ಮ್ಯಾಗಜಿನ್, ಪುಸ್ತಕಗಳಲ್ಲಿರುವ ಚಿತ್ರಗಳನ್ನು ಪಾಠದ ವಿಷಯಗಳಿಗೆ ಸಂದರ್ಭಾನುಸಾರ ವಾಗಿ ಕಲಿಸಲು ಬಳಸಿಕೊಳ್ಳಿ.

ಪ್ರತಿ ಪಾಠದ ಅಕ್ಷರ, ಪದಗಳ ಮಿಂಚುಪಟ್ಟಿ ತಯಾರಿಸಿ ಅವುಗಳಿಂದ ಅಕ್ಷರ ಚಪ್ಪರವನ್ನು ಮಾಡುತ್ತಾ ಹೋಗಿ. ಕಲಿಕಾರ್ಥಿಗಳು ಲವಲವಿಕೆಯಿಂದ ಕಲಿಯುವಂತಾಗಬೇಕಾದರೆ ಅವರಿಂದ ಹಾಡು, ಒಗಟು,

ಚುಟುಕುಗಳನ್ನು ಮಾಡಿಸಿ ಮತ್ತು ಮನೋರಂಜನಾ ಚಟುವಟಿಕೆಗಳನ್ನು ನಡೆಸಿ. ಪ್ರತಿದಿನ ಕಲಿತ ಅಕ್ಷರವನ್ನು ಕಡ್ಡಿಯಿಂದ ನೆಲದ ಮೇಲೆ, ಬೆರಳಿನಿಂದ ಅಕ್ಕಿ, ಹಿಟ್ಟು, ದವಸಧಾನ್ಯಗಳ ಮೇಲೆ ಬರೆದು ಅಭ್ಯಾಸ ಮಾಡಲು ತಿಳಿಸಿ.